# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಸಿ.ಸಿ ನಂ. 733-2019** **ಪಿ. ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಹೆಚ್.ಎಂ.ನಟರಾಜು<br>55 ವರ್ಷ<br>ವ್ಯಾಪಾರ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 11-10-2021. |

**ಮುಖ್ಯ ವಿಚಾರಣೆ ಶ್ರೀ ಕೆ.ಎನ್.ಎಸ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ಸತ್ಯದಿಂದ ಕೂಡಿದ್ದು ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.

ಆರೋಪಿ ನನಗೆ ಕೊಟ್ಟ ಚೆಕ್ಕನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ಅದರ ಮೇಲಿರುವ ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು, ದಿಃ28-12-2018 ರಂದು ಬ್ಯಾಂಕ್ ನವರು ಕೊಟ್ಟ ಹಿಂಬರಹವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, ದಿಃ18-01-2019 ರಂದು ನಾನು ವಕೀಲರ ಮೂಲಕ ಆರೋಪಿಗೆ ಕಳುಹಿಸಿದ ನೋಟಿಸ್‌ನ ಕಛೇರಿ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-3 ಎಂದು, ಆರೋಪಿಗೆ ನೋಟಿಸ್ ಕಳುಹಿಸಿದ ಬಗ್ಗೆ ಅಂಚೆ ರಶೀದಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-4 ಎಂದು, ಆರೋಪಿಗೆ ಸದರಿ ನೋಟಿಸ್ ದಿ.24-01-2019 ರಂದು ಖುದ್ದು ಜಾರಿಯಾಗಿದ್ದು ಈ ಸಂಬಂಧ ಸಬ್ ಪೋಸ್ಟ್‌ಮಾಸ್ಟರ್, ಮೈಸೂರು ಲಾ ಕೋರ್ಟ್ ಇವರು ನೀಡಿರುವ ಟ್ರ್ಯಾಕ್ ಕನ್ಸೈನ್ ಮೆಂಟ್ ಹಾಜರುಪಡಿಸುತ್ತಿದ್ದು ಅದನ್ನು ನಿಪಿ-5 ಎಂದು, ದಿ.25-01-2019 ರಂದು ಆರೋಪಿ ನನಗೆ ಕಳುಹಿಸಿದ ಜವಾಬು ನೋಟಿಸ್ ಹಾಜರುಪಡಿಸುತ್ತಿದ್ದು ಅದನ್ನು ನಿಪಿ-6 ಎಂದು, 28-08-2018 ರಿಂದ 09-09-2021 ರವರೆಗಿನ ಹೆಚ್.ಡಿ.ಎಫ್.ಸಿ ಬ್ಯಾಂಕ್

ನಂಜನಗೂಡಿನ ನನ್ನ ಖಾತೆಯ ಬ್ಯಾಂಕ್ ಸ್ಟೇಟ್‌ಮೆಂಟ್ ನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–7 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**